All India Radio: Bangalore
National Bulletin In Kannada
07.06.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<>><><*><><<>

ಮುಖ್ಯಾಂಶಗಳು

೧. ಆರ್ಥಿಕ ಸಲಹಾ ಮಂಡಳಿಯೊಂದಿಗೆ ಪ್ರಧಾನಿ ಸಭೆ; ದೇಶದ ಆರ್ಥಿಕ ಪರಿವರ್ತನೆ, ದೀರ್ಘಕಾಲಿನ ಅಭಿವೃದ್ಧಿ ಅಗತ್ಯತೆಗಳ ಪರಿಶೀಲನೆ

೨. ಅಂತಾರಾಷ್ಟ್ರೀಯ ಗಡಿಭಾಗದಲ್ಲಿ ತೀವ್ರ ನಿಗಾವಹಿಸಲು ಭದ್ರತಾಪಡೆಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆ

೩. ಭಾರತ-ನೇಪಾಳ ಬಾಂಧವ್ಯ ವೃದ್ಧಿ: ನೂತನ ಯುಪಿಐ ಸಂಪರ್ಕ ಮತ್ತು ಆಳ ಪುನರ್ನಿರ್ಮಾಣ ಯೋಜನೆಗಳ ಹಸ್ತಾಂತರ

೪. ನೀಟ್-ಯುಜಿ ೨೦೨೬ ಮರುಪರೀಕ್ಷೆ; ಪ್ರಶ್ನೆ ಪತ್ರಿಕೆ ಸೋರಿಕೆ ವದಂತಿ ನಿರಾಕರಿಸಿದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ

೫. ಮಹಿಳಾ ಸ್ಯಾಫ್ ಫುಟ್ಬಾಲ್ ಚಾಂಪಿಯನ್‌ಶಿಪ್; ಬಾಂಗ್ಲಾದೇಶವನ್ನು ಮಣಿಸಿ, ದಾಖಲೆಯ ಆರನೇ ಬಾರಿ ಪ್ರಶಸ್ತಿ ಗೆದ್ದ ಭಾರತ

<>><><*><><<>

ಪ್ರಧಾನಿ ನರೇಂದ್ರ ಮೋದಿ ನಿನ್ನೆ ಪ್ರಧಾನಮಂತ್ರಿ-ಆರ್ಥಿಕ ಸಲಹಾ ಮಂಡಳಿ - ಇಎಸಿಯ ಸದಸ್ಯರೊಂದಿಗೆ ಸಭೆ ನಡೆಸಿದರು. ಜಾಗತಿಕ ಅನಿಶ್ಚಿತತೆಯ ಸಮಯದಲ್ಲಿ ಭಾರತದ ಆರ್ಥಿಕ ಬೆಳವಣಿಗೆಯನ್ನು ಮತ್ತಷ್ಟು ಹೆಚ್ಚಿಸಲು ಪ್ರಧಾನಿ ಮತ್ತು ಇಎಸಿ ವಿವಿಧ ವಿಚಾರಗಳು ಮತ್ತು ಕ್ರಮಗಳ ಕುರಿತು ಚರ್ಚಿಸಿದರು. ಜೀವನ ಸುಲಭತೆ ಮತ್ತು ವ್ಯವಹಾರ ಸುಲಭತೆಯನ್ನು ಸುಧಾರಿಸಲು ವಿವಿಧ ಸುಧಾರಣೆಗಳನ್ನು ಸಹ ಚರ್ಚಿಸಲಾಯಿತು. ಪಶ್ಚಿಮ ಏಷ್ಯಾ ಸಂಘರ್ಷವು ಭಾರತ ಮತ್ತು ಜಗತ್ತಿನ ಮೇಲೆ ಬೀರಿದ ಪರಿಣಾಮ ಕುರಿತ ಮೌಲ್ಯಮಾಪನವನ್ನು ಸದಸ್ಯರು ನೀಡಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ಭಾರತದ ಆರ್ಥಿಕ ಪರಿವರ್ತನೆ ಮತ್ತು ದೀರ್ಘಕಾಲೀನ ಅಭಿವೃದ್ಧಿ ಆದ್ಯತೆಗಳಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಅವರು

ಚರ್ಚಿಸಿರುವುದಾಗಿ ತಿಳಿಸಿದ್ದಾರೆ. ಸುಧಾರಣೆಗಳ ಪಯಣಕ್ಕೆ ಹೆಚ್ಚಿನ ವೇಗ ನೀಡುವುದು ಮತ್ತು ಜೀವನ ಸುಲಭತೆ ಮತ್ತು ವ್ಯವಹಾರ ಸುಲಭತೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಕೋನಗಳನ್ನು ಸಹ ಹಂಚಿಕೊಳ್ಳಲಾಗಿದೆ ಎಂದಿದ್ದಾರೆ. ಆರ್ಥಿಕ ಸಲಹಾ ಮಂಡಳಿಯು ಸ್ವತಂತ್ರ ಸಂಸ್ಥೆಯಾಗಿದ್ದು, ಇದು ಭಾರತ ಸರ್ಕಾರಕ್ಕೆ, ವಿಶೇಷವಾಗಿ ಪ್ರಧಾನಮಂತ್ರಿಗೆ, ಆರ್ಥಿಕ ಮತ್ತು ಸಂಬಂಧಿತ ವಿಷಯಗಳ ಕುರಿತು ಸಲಹೆ ನೀಡುತ್ತದೆ.

<><><*><><<>

ಅಂತಾರಾಷ್ಟ್ರೀಯ ಗಡಿ ಭಾಗಗಳಲ್ಲಿ ನಡೆಯುವ ಹಣಕಾಸು ವಹಿವಾಟುಗಳು, ಕಟ್ಟಡ ನಿರ್ಮಾಣ ಹಾಗೂ ಆಸ್ತಿ ಖರೀದಿ ಮತ್ತು ಮಾರಾಟ ಪ್ರಕ್ರಿಯೆಗಳ ಮೇಲೆ ತೀವ್ರ ನಿಗಾ ವಹಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭದ್ರತಾ ಪಡೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ತ್ರಿಪುರಾದ ಗಡಿ ಭದ್ರತಾ ಪಡೆ-ಬಿಎಸ್‌ಎಫ್ ನ ಪ್ರಧಾನ ಕಚೇರಿಯಲ್ಲಿ ಈಶಾನ್ಯ ರಾಜ್ಯದ ಗಡಿ ಪ್ರದೇಶಗಳ ಭದ್ರತೆಗೆ ಸಂಬಂಧಿಸಿದಂತೆ ನಡೆಸಿದ ಉನ್ನತ ಮಟ್ಟದ ಪರಿಶೀಲನಾ ಸಭೆಯಲ್ಲಿ ಅವರು ಈ ನಿರ್ದೇಶನ ನೀಡಿದ್ದಾರೆ. ಗಡಿ ಭಾಗದಲ್ಲಿ, ಕಳೆದ ಐದು ವರ್ಷಗಳ ಭೂ ದಾಖಲೆಗಳನ್ನು ಕೂಲಂಕಷವಾಗಿ ಮರುಪರಿಶೀಲನೆಗೆ ಒಳಪಡಿಸಬೇಕು ಎಂದು ಗೃಹ ಸಚಿವರು ಇದೇ ಸಂದರ್ಭದಲ್ಲಿ ಆದೇಶಿಸಿದ್ದಾರೆ. ಗಡಿ ದಾಟಿ ನಡೆಯುವ ಮಾದಕ ದ್ರವ್ಯ ಹಾಗೂ ಶಸ್ತ್ರಾಸ್ತ್ರ ಕಳ್ಳಸಾಗಣೆ ವಿರುದ್ಧ ನಿರಂತರ ಮತ್ತು ಸರಣಿ ಕಾರ್ಯಾಚರಣೆಗಳನ್ನು ಕೈಗೊಳ್ಳಬೇಕು. ಮಾದಕದ್ರವ್ಯ ಜಾಲದ ಹಿಂದಿರುವ ಪ್ರತಿಯೊಬ್ಬ ಸಾಗಣೆದಾರನ ವಿರುದ್ಧವೂ ಅತ್ಯಂತ ಕಠಿಣ ಹಾಗೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><*><><<>

ಭಾರತಕ್ಕೆ ಭೇಟಿ ನೀಡಿರುವ ನೇಪಾಳ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಅವರೊಂದಿಗೆ ನವದೆಹಲಿಯಲ್ಲಿ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ವೇಳೆ, ೨೦೧೫ರ ಭೂಕಂಪದ ನಂತರದ ಪುನರ್ನಿರ್ಮಾಣ ಕಾರ್ಯಕ್ರಮದಡಿ ಸಿದ್ಧಗೊಂಡಿರುವ ೬೨ ಆರೋಗ್ಯ ಸೌಲಭ್ಯಗಳು ಹಾಗೂ ೧೨ ಸಾಂಸ್ಕೃತಿಕ ಪರಂಪರೆ ಯೋಜನೆಗಳನ್ನು ವರ್ಚುವಲ್ ಮೂಲಕ ನೇಪಾಳಕ್ಕೆ ಹಸ್ತಾಂತರಿಸಲಾಯಿತು. ಉಭಯ ದೇಶಗಳ ನಡುವಿನ ಗಡಿಯಾಚೆಗಿನ ವೈಯಕ್ತಿಕ ಹಣ ವರ್ಗಾವಣೆಯನ್ನು ಸುಲಭಗೊಳಿಸುವ ನಿಟ್ಟಿನಲ್ಲಿ, ಭಾರತದ ಯುಪಿಐ ಮತ್ತು ನೇಪಾಳದ ನ್ಯಾಷನಲ್ ಪೇಮೆಂಟ್ಸ್ ಇಂಟರ್‌ಫೇಸ್ ನಡುವಿನ ಡಿಜಿಟಲ್ ಜೋಡಣೆಗೆ ಉಭಯ ನಾಯಕರು ಜಂಟಿಯಾಗಿ ಚಾಲನೆ ನೀಡಿದರು. ಇದರೊಂದಿಗೆ, ನೇಪಾಳಕ್ಕಾಗಿ 'ವಾಯ್ಸ್ ಫಸ್ಟ್' ಭಾಷಾ

ಅನುವಾದ ವೇದಿಕೆಯ ರಾಷ್ಟ್ರೀಯ ಡಿಜಿಟಲ್ ಮೂಲಸೌಕರ್ಯವನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು, ಭಾರತದ 'ಡಿಜಿಟಲ್ ಇಂಡಿಯಾ ಭಾಷಿಣಿ' ಮತ್ತು ಕಠ್ಮಂಡು ವಿಶ್ವವಿದ್ಯಾಲಯದ ನಡುವೆ ಸಹಿ ಮಾಡಲಾದ ತಿಳಿವಳಿಕೆ ಪತ್ರವನ್ನು ಉಭಯ ಸಚಿವರು ವಿನಿಮಯ ಮಾಡಿಕೊಂಡರು. ಸಭೆಯ ಆರಂಭಿಕ ನುಡಿಗಳಲ್ಲಿ ಮಾತನಾಡಿದ ಸಚಿವ ಎಸ್.ಜೈಶಂಕರ್, ಭಾರತ ಮತ್ತು ನೇಪಾಳವು ತಮ್ಮ ಮುಕ್ತ ಗಡಿ ಪ್ರದೇಶದಲ್ಲಿ ಭದ್ರತೆಯನ್ನು ಕಾಯ್ದುಕೊಳ್ಳಲು ನಿಕಟವಾಗಿ ಸಹಕರಿಸುತ್ತಿವೆ. ಕಷ್ಟದ ಸಮಯದಲ್ಲಿ ಉಭಯ ದೇಶಗಳು ಯಾವಾಗಲೂ ಪರಸ್ಪರರಿಗೆ ಬೆಂಬಲವಾಗಿ ನಿಂತಿವೆ ಎಂದು ತಿಳಿಸಿದರು.

<>><><*><><<>

ಏಷ್ಯಾ-ಪೆಸಿಫಿಕ್ ವಲಯದ ವಿಮಾನ ಪ್ರಯಾಣಿಕರ ಸಂಖ್ಯೆಯು, ೨೦೪೪ರ ವೇಳೆಗೆ ಬರೋಬ್ಬರಿ ೪೧೦ ಕೋಟಿಗೆ ತಲುಪುವ ನಿರೀಕ್ಷೆಯಿದ್ದು, ಈ ಅಭೂತಪೂರ್ವ ಬೆಳವಣಿಗೆಯಲ್ಲಿ ಭಾರತವು ಅತ್ಯಂತ ಪ್ರಮುಖ ಹಾಗೂ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದು ಅಂತಾರಾಷ್ಟ್ರೀಯ ವಾಯು ಸಾರಿಗೆ ಸಂಸ್ಥೆ-ಐಎಟಿಎ ತಿಳಿಸಿದೆ. ಬ್ರೆಜಿಲ್‌ನ ಬ್ರೆಸಿಲಿಯಾ ನಗರದಲ್ಲಿ ನಿನ್ನೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಎಟಿಎ ಸಂಸ್ಥೆಯ ಏಷ್ಯಾ-ಪೆಸಿಫಿಕ್ ವಲಯದ ಪ್ರಾದೇಶಿಕ ಉಪಾಧ್ಯಕ್ಷ ಶೆಲ್ಡನ್ ಹೀ, ಕಳೆದ ಹಲವು ವರ್ಷಗಳಿಂದ ಈ ವಲಯದ ವಾಯುಯಾನ ಪ್ರಗತಿಯಲ್ಲಿ ಭಾರತದ ಕೊಡುಗೆ ಅತ್ಯಂತ ಗಮನಾರ್ಹವಾಗಿದೆ ಎಂದು ಶ್ಲಾಘಿಸಿದ್ದಾರೆ. ಭಾರತ, ಇಂದು ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೇಶೀಯ ನಾಗರಿಕ ವಿಮಾನಯಾನ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಜೊತೆಗೆ, ಕಳೆದ ಐದರಿಂದ ಹತ್ತು ವರ್ಷಗಳಲ್ಲಿ ಏಷ್ಯಾ-ಪೆಸಿಫಿಕ್ ವಲಯದ ವಾಯುಯಾನ ಕ್ಷೇತ್ರವು ಉತ್ತಮ ಬೆಳವಣಿಗೆಯನ್ನು ಕಂಡಿದ್ದು, ಮುಂದಿನ ದಶಕದಲ್ಲೂ ಈ ಭರವಸೆಯ ವೇಗ ಹೀಗೆಯೇ ಮುಂದುವರಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜಾಗತಿಕ ವಿಮಾನ ಸಂಚಾರದ ಒಟ್ಟು ಶೇಕಡಾ ೮೩ರಷ್ಟನ್ನು ಪ್ರತಿನಿಧಿಸುವ ವಿಶ್ವದ ೩೭೦ಕ್ಕೂ ಹೆಚ್ಚು ಪ್ರಮುಖ ವಿಮಾನಯಾನ ಸಂಸ್ಥೆಗಳು ಐಎಟಿಎ ಒಕ್ಕೂಟದ ಸದಸ್ಯತ್ವ ಹೊಂದಿವೆ. ಪ್ರಸ್ತುತ ನಿನ್ನೆಯಿಂದ ನಾಳೆಯವರೆಗೆ ಬ್ರೆಜಿಲ್‌ನಲ್ಲಿ ಐಎಟಿಎ ಸಂಸ್ಥೆಯ ೮೨ನೇ ವಾರ್ಷಿಕ ಮಹಾಸಭೆ ಹಾಗೂ ವಿಶ್ವ ವಾಯು ಸಾರಿಗೆ ಶೃಂಗಸಭೆ ನಡೆಯುತ್ತಿದೆ.

<>><><*><><<>

ನೀಟ್-ಯುಜಿ ೨೦೨೬ರ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಅಥವಾ ಮುಂಚಿತವಾಗಿಯೇ ಲಭ್ಯವಾಗಿದೆ ಎಂಬುದರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ- ಎನ್‌ಟಿಎ ಸ್ಪಷ್ಟವಾಗಿ

ನಿರಾಕರಿಸಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಸಂಸ್ಥೆಯು, ಇಂತಹ ಸುಳ್ಳು ಸುದ್ದಿಗಳು ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಆತಂಕವನ್ನು ದುರುಪಯೋಗಪಡಿಸಿಕೊಳ್ಳುವ ಸಂಘಟಿತ ವಂಚನಾ ಜಾಲಗಳ ಕೆಲಸವಾಗಿದೆ ಎಂದು ತಿಳಿಸಿದೆ. ಪರೀಕ್ಷಾ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂದು ಸ್ಪಷ್ಟಪಡಿಸಿರುವ ಎನ್‌ಟಿಎ, ಅಭ್ಯರ್ಥಿಗಳಿಗೆ ನ್ಯಾಯಸಮ್ಮತ ಮತ್ತು ಸುರಕ್ಷಿತ ವಾತಾವರಣದಲ್ಲಿ ಪರೀಕ್ಷೆ ನಡೆಸಲು ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಹಾಗೂ ಕಟ್ಟುನಿಟ್ಟಿನ ಭದ್ರತೆಯನ್ನು ಕೈಗೊಳ್ಳಲಾಗಿದೆ ಎಂದು ದೃಢಪಡಿಸಿದೆ.

<>><><*><><<>

ಪಶ್ಚಿಮ ಬಂಗಾಳದ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಾದ ದಕ್ಷಿಣೇಶ್ವರ ಮತ್ತು ಕಾಳೀಘಾಟ್ ದೇವಸ್ಥಾನಗಳ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಬಿಜೆಪಿ ಸರ್ಕಾರವು ಪ್ರಮುಖ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದ್ದಾರೆ. ಕೋಲ್ಕತಾದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಐತಿಹಾಸಿಕ 'ಗಂಗಾಸಾಗರ ಮೇಳ'ವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಈಗಾಗಲೇ ಕೆಲಸಗಳು ಪ್ರಾರಂಭವಾಗಿವೆ ಎಂದಿದ್ದಾರೆ.

<>><><*><><<>

ಗೋವಾದ ಮಡ್ಗಾಂವ್‌ನಲ್ಲಿ ನಿನ್ನೆ ನಡೆದ ೨೦೨೬ರ ಮಹಿಳಾ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ರೋಚಕ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಬಾಂಗ್ಲಾದೇಶವನ್ನು ೩-೧ ಗೋಲುಗಳ ಅಂತರದಿಂದ ಮಣಿಸಿದ ಭಾರತ ತಂಡ, ದಾಖಲೆಯ ಆರನೇ ಬಾರಿಗೆ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಈ ಐತಿಹಾಸಿಕ ಗೆಲುವಿನೊಂದಿಗೆ ಭಾರತೀಯ ಮಹಿಳಾ ಫುಟ್‌ಬಾಲ್ ತಂಡ, ಬರೋಬ್ಬರಿ ಏಳು ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಅತ್ಯಂತ ಪ್ರತಿಷ್ಠಿತ ಸ್ಯಾಫ್ ಕಪ್ ಅನ್ನು ಮತ್ತೊಮ್ಮೆ ತನ್ನದಾಗಿಸಿಕೊಂಡಿದೆ.

<>><><*><><<>

ನವ ಚಂಡಿಗಢದ ಮುಲ್ಲನಪುರ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ಅಫ್ಘಾನಿಸ್ತಾನದ ನಡುವಿನ ಏಕೈಕ ಟೆಸ್ಟ್ ಪಂದ್ಯದ ಮೊದಲ ದಿನದಾಟದ ಅಂತ್ಯಕ್ಕೆ ನಿನ್ನೆ ಭಾರತ, ೭೫ ಓವರ್‌ಗಳಲ್ಲಿ ೩ ವಿಕೆಟ್ ಕಳೆದುಕೊಂಡು ೩೬೮ ರನ್ ಗಳಿಸಿದೆ. ಭಾರತದ ಪರ ಕೆ.ಎಲ್.ರಾಹುಲ್ ಶತಕ ಗಳಿಸಿದ್ದು, ಎರಡನೇ ವಿಕೆಟ್ ಜೊತೆಯಾಟಕ್ಕೆ ಸಾಯಿ ಸುದರ್ಶನ್ ಅವರೊಂದಿಗೆ ೧೩೯ ರನ್

ಕಲೆಹಾಕಿದರು. ನಂತರ ಶತಕ ಗಳಿಸಿದ ಶುಭ್‌ಮನ್ ಗಿಲ್ ಹಾಗೂ ಅರ್ಧ ಶತಕ ಗಳಿಸಿದ ರಿಷಭ್ ಪಂತ್ ಕಣದಲ್ಲಿದ್ದಾರೆ. ಎರಡನೇ ದಿನದಾಟ ಇಂದು ಬೆಳಗ್ಗೆ ೯.೩೦ ಕ್ಕೆ ಆರಂಭವಾಗಲಿದೆ.

<>><><*><><<>

ಮಂಗೋಲಿಯಾದ ಉಲಾನ್ ಬಾತರ್‌ನಲ್ಲಿ ನಡೆಯುತ್ತಿರುವ ಉಲಾನ್‌ಬಾತರ್ ಓಪನ್ ೨೦೨೬ ಕುಸ್ತಿ ಪಂದ್ಯಾವಳಿಯ ಮೂರನೇ ದಿನದಂದು, ಭಾರತದ ಸಾಗರ್ ಜಾಗ್ಲಾನ್ ಮತ್ತು ಕಾಜಲ್ ಧೋಚಕ್ ಅವರು ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ನಿನ್ನೆಯ ಪಂದ್ಯಗಳಲ್ಲಿ ಭಾರತ, ಒಟ್ಟು ೨ ಚಿನ್ನ ಹಾಗೂ ೪ ಕಂಚಿನ ಪದಕಗಳನ್ನು ಗೆದ್ದುಕೊಂಡಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧೨ ಕ್ಕೆ ><><<>